ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

ಸಂಪುಟ ೧ ಸಂಚಿಕೆ ೧೭ ಕೊಪ್ಪ ೧೨-೧೨-೮೨ ಭಾನುವಾರ ಬೆಲೆ ೪೦ ಪೈಸೆ

ಜಾಗ್ರತಾ ಆಯೋಗದ ಬಲೆಗೆ ಬಿದ್ದ

ಕೊಪ್ಪ ತಾ|| ಸರ್ವೆಯರ್ ಬಂಧನ, ಬಿಡುಗಡೆ

ಕೊಪ್ಪ: ಇಲ್ಲಿನ ತಾ|| ಸರ್ವೆಯರ್ ಸಿ.ಕೆ.ಶಿವಕುಮಾರ್ ಅಕ್ರಮ ಸಂಭಾವನೆ ಪಡೆಯುವಾಗ ಜಾಗ್ರತಾ ಆಯೋಗದ ಬಲೆಗೆ ಬಿದ್ದುದಾಗಿ ವರದಿಯಾಗಿದೆ.

ಶಾಂತಾರಾಮ್ ಶೆಟ್ಟಿ ಎಂಬವರ ದರ್ಖಾಸ್ತು ಕಡತದ ಸಂಬಂಧವಾಗಿ ೮೦೦ ರೂ. ಲಂಚವನ್ನು ಅವರು ಕೇಳಿದ್ದು, ಡಿ. ೭ರ ರಾತ್ರಿ ತಮ್ಮ ಮನೆಯಲ್ಲಿ ಲಂಚದ ಮೊದಲ ಕಂತಾಗಿ ೧೫೦ ರೂ.ಗಳನ್ನು ಪಡೆಯುತ್ತಿದ್ದಾಗ ಚಿಕ್ಕಮಗಳೂರು ಜಾಗ್ರತಾ ಆಯೋಗದ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಎಂ.ಖುತ್ರಯ್ಯ ಒಡ್ಡಿದ ಜಾಲಕ್ಕೆ ಅವರು ಸಿಕ್ಕಿಬಿದ್ದರೆಂದು ಹೇಳಲಾಗಿದೆ.

ಅವರನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ವರದಿಯಾಗಿದೆ.

ಆದರೆ 'ಅವರನ್ನು ಬಂಧಿಸಿಲ್ಲ. ಅವರಿನ್ನೂ ಡ್ಯೂಟಿ ಮೇಲೇ ಇದ್ದಾರೆ.' ಎಂಬ ಸರ್ವೆ ಇಲಾಖೆ ಮೂಲವೊಂದರ ಹೇಳಿಕೆಯನ್ನು ಖಚಿತ ಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಶಿವಕುಮಾರ್ ಸಿಕ್ಕಲಿಲ್ಲ. "ಅವರು ಊರಲ್ಲಿಲ್ಲ" ಎಂದು ತಿಳಿದು ಬಂತು.

ಭೀಕರ ಅಪಘಾತ ತಪ್ಪಿತು

ಶೃಂಗೇರಿ: ಡಿ. ೯ರಂದು ಇಲ್ಲಿಂದ ಹೈದ್ರಾಬಾದಿಗೆ ಹೊರಟಿದ್ದ ಸರ್ಕಾರಿ ಬಸ್ಸು ಕಾವಡಿ ಬಳಿ ಭೀಕರ ಅಪಘಾತಕ್ಕೊಳಗಾಗಬೇಕಾಗಿದ್ದುದು ಡ್ರೈವರನ ಚುರುಕು ಮತ್ತು ಚಾಕಚಕ್ಯತೆಯಿಂದಾಗಿ ರಸ್ತೆ ಬದಿಯ ಧರೆಗೆ ಉಜ್ಜಿ ನಿಂತಿತು. ಪ್ರಯಾಣಿಕರ ಸಂಖ್ಯೆಯೂ ಕಡಿಮೆಯಿದ್ದು, ಯಾರಿಗೂ ಅಪಾಯವಾಗಲಿಲ್ಲ. ಬಸ್ಸಿಗೂ ಜಖಂ ಆಗಲಿಲ್ಲ —ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ತೋಟಕಾರ್ಮಿಕರ ಸಂಘದ ಸಭೆ

ಮೂಡಿಗೆರೆ: ಕರ್ನಾಟಕ ಪ್ರಾವಿನ್ಶಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ನಿನ ಸಭೆ ಎ.ಕೆ.ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಡಿ. ೯ರಂದು ಇಲ್ಲಿ ನಡೆಯಿತು.

ಕಳೆದ ಸೆ. ೩೦ರ ರಾತ್ರಿ ಕೆ.ಜಿ.ಎಫ್.ನಲ್ಲಿ ಕೊಲೆಯಾದ ಪಕ್ಷದ ಕಾರ್ಮಿಕ ಮುಖಂಡ ಆರೋಗ್ಯ ದಾಸ್‌ರವರಿಗೆ, ಈಚೆಗೆ ದಿವಂಗತರಾದ ಬ್ರೆಜ್ನೆವ್, ಪ್ರಮೋದ್ ದಾಸ್ ಗುಪ್ತ ಹಾಗೂ ಗಂಗಾಧರ ನಮೋಶಿ ಇವರುಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಭೆಯು ಡಿ. ೧೭ರಿಂದ ತೋಟಕಾರ್ಮಿಕರು ಸಂಯುಕ್ತವಾಗಿ ನಡೆಸಲು ಉದ್ದೇಶಿಸಿರುವ ಮುಷ್ಕರದಲ್ಲಿ ಸಂಘದ ಸದಸ್ಯರೆಲ್ಲರೂ ಭಾಗವಹಿಸಲು ಕರೆಕೊಟ್ಟಿತು.

ತೋಟ ಕಾರ್ಮಿಕರ ಕಲ್ಯಾಣಕ್ಕೆ ಏನನ್ನೂ ಮಾಡದಿರುವ ಕಾಂಗ್ರೆಸ್ಸಿಗೆ ವಿರುದ್ಧವಾಗಿ ಜನವರಿ ೫ರ ಚುನಾವಣೆಯಲ್ಲಿ ಮತ ನೀಡುವಂತೆ ಸಭೆ ತೋಟ ಕಾರ್ಮಿಕರಿಗೆ ಕರೆ ಕೊಟ್ಟಿತು.

ಮಕ್ಕಳ ದಿನಾಚರಣೆ ಪ್ರಬಂಧ ಸ್ಪರ್ಧೆ ಐ.ಡಿ.ಎಸ್.ಜಿ.ಗೆ ಪ್ರಥಮ ಬಹುಮಾನ

ಚಿಕ್ಕಮಗಳೂರು: ಮಕ್ಕಳ ದಿನಾಚರಣೆ ಅಂಗವಾಗಿ ಆಧಾರ ಪುಸ್ತಕಗಳನ್ನು ಅಭ್ಯಸಿಸಿ ಬರೆಯುವ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಚಿಕ್ಕಮಗಳೂರು ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನ ಪ್ರಥಮ ವರ್ಷದ ಬಿ.ಕಾಂ.ವಿದ್ಯಾರ್ಥಿ ಎಸ್.ಡಿ.ಮಂಜುನಾಥ ಸ್ವಾಮಿ ಪ್ರಥಮ ಬಹುಮಾನ ಪಡೆದಿದ್ದು, ಅವರು ೩೨ ಪುಟಗಳಲ್ಲಿ, ಸುಮಾರು ೩೦೬೫ ಶಬ್ದಗಳಲ್ಲಿ ಜವಾಹರಲಾಲ್ ನೆಹರೂರವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ತನ್ನದೇ ಆದ ಶೈಲಿಯಲ್ಲಿ ಬರೆದಿರುವರೆಂದು ಬಹುಮಾನದ ದಾನಿಗಳೂ ಆದ ರಾಜ್ಯ ಸಹ ಸಂಘಟನಾ ಕಮಿಷನರ್ (ಸ್ಕೌಟ್ಸ್) ಎ.ರಾಜಗೋಪಾಲ ರಾವ್ ತಿಳಿಸಿದ್ದಾರೆ.

'ಸಮಾನ ಮನಸ್ಕರ ಸಮಾವೇಶ': ಡಿ. ೧೫ರ ನಂತರ ಅಂತಿಮ ತೀರ್ಮಾನ

ಕೊಪ್ಪ: ಹಳೆಯ ಸಮಾಜವಾದಿ ಯುವ ಮುಖಂಡ ಬಿ.ಜಿ.ಚಂದ್ರಶೇಖರ್ ಕರೆದಿದ್ದ 'ಸಮಾನ ಮನಸ್ಕರ ಸಮಾವೇಶ' ಡಿ. ೧೦ರಂದು ಅವರ ಮನೆಯಲ್ಲಿ ವಿ.ಬಿ.ಧರ್ಮಯ್ಯ ಗೌಡರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ರಾಜಕೀಯ ನಿಲುವಿನ ಬಗ್ಗೆ ಅಂತಿಮ ತೀರ್ಮಾನವನ್ನು ಡಿ. ೧೫ರ ನಂತರ ತೆಗೆದುಕೊಳ್ಳುವ ಅಧಿಕಾರವನ್ನು ಚಂದ್ರಶೇಖರ್‌ಗೇ ವಹಿಸಿತೆಂದು ಅವರು 'ಮುಂಜಾವು'ಗೆ ತಿಳಿಸಿದ್ದಾರೆ.

ಹೆಚ್ಚಾಗಿ ಹಳೆಯ ಸಮಾಜವಾದಿಗಳೇ ಸೇರಿದ್ದ ಈ ಸಭೆಗೆ ಖುದ್ದು ಬರಲಾರದ ೩೦-೪೦ ಜನ ಸಮಾನ ಮನಸ್ಕರು, ಸಭೆಯ ತೀರ್ಮಾನಕ್ಕೆ ತಾವು ಬದ್ಧವಾಗಿರುವುದಾಗಿ ಪತ್ರ ಬರೆದಿದ್ದರೆಂದೂ ಅವರು ತಿಳಿಸಿದಾರೆ.

ಶಂಕರ ಹೆಗ್ಡೆ ನಾಮ ಪತ್ರ ಸಲ್ಲಿಕೆ:

ಕ್ರಾಂತಿರಂಗದ ಸ್ಪಷ್ಟನೆ

ಕೊಪ್ಪ: "ಟಿ.ಆರ್.ಶಂಕರ ಹೆಗ್ಡೆಯವರು ಶೃಂಗೇರಿ ವಿಧಾನ ಸಭಾ ಕ್ಷೇತ್ರಕ್ಕೆ ಕ್ರಾಂತಿ ರಂಗದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವುದಾಗಿ ಪತ್ರಿಕೆಗಳಲ್ಲಿ ಬಂದಿದೆ. ಆದರೆ ಅವರು ಕ್ರಾಂತಿ ರಂಗದ ಅಧಿಕೃತ ಅಭ್ಯರ್ಥಿ ಅಲ್ಲ. ಅವರು ಪಕ್ಷೇತರರಾಗಿರಬಹುದು. ತಾಲ್ಲೂಕಿನ ಕ್ರಾಂತಿ ರಂಗದವರು ವಿರೋಧ ಪಕ್ಷಗಳ ಒಕ್ಕೂಟದಲ್ಲೇ ಇದ್ದೇವೆ" ಎಂಬುದಾಗಿ ತಾ|| ಕ್ರಾಂತಿ ರಂಗದ ಅಧ್ಯಕ್ಷರೂ ವಿರೋಧ ಪಕ್ಷಗಳ ಸಮನ್ವಯ ಸಮಿತಿಯ ಸಂಚಾಲಕರೂ ಆಗಿರುವ ಮಳಿಗೆ ಚಂದ್ರಶೇಖರ್ 'ಮುಂಜಾವು'ಗೆ ತಿಳಿಸಿದ್ದಾರೆ.

ಅಂಚೆ ನೌಕರರ ಸಭೆ

ಹರಿಹರಪುರ: ಅಖಿಲ ಭಾರತ ಅಂಚೆ ನೌಕರರ ಕೊಪ್ಪ ಶಾಖೆಯ ಜಂಟಿ ಕಾರ್ಯಕಾರಿ ಸಮಿತಿಯ ಮಾಹೆಯಾನ ಸಭೆ ಡಿ. ೧೨ರಂದು ಇಲ್ಲಿ ನಡೆಯಿತು. ಕೊಪ್ಪ ಪ್ರಧಾನ ಅಂಚೆ ಕಚೇರಿಯ ಸಹಾಯಕ ಪೋಸ್ಟ್ ಮಾಸ್ಟರ್ ಭುಜಂಗರಾವ್ ಅಧ್ಯಕ್ಷತೆ ವಹಿಸಿದ್ದರು.

ನೌಕರರ ಇನ್ನೂ ಬಗೆಹರಿಯದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿ, ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಅಂಚೆ ವಿಭಾಗಾಧಿಕಾರಿಗಳಲ್ಲಿ ಮನವಿ ಮಾಡಲಾಯಿತು.

ತೀವ್ರ ಅಸ್ವಸ್ಥರಾಗಿರುವ ತೆಕ್ಕೂರು ಪೋಸ್ಟ್ ಮಾಸ್ಟರ್ ಚಿದಂಬರ ಶರ್ಮ ಅವರ ಸಹಾಯಾರ್ಥ ನೌಕರರಿಂದ ನಿಧಿ ಸಂಗ್ರಹಿಸಿ ಕಳಿಸಿಕೊಡಲಾಯಿತು.

ಗೋಪಾಲಕೃಷ್ಣ ಸ್ವಾಗತಿಸಿ, ಶ್ರೀನಿವಾಸ ಮೂರ್ತಿ ವಂದಿಸಿದರು.

ಡಿ. ೧೫ ಮತ್ತು ೨೯ರಂದು

ಚಿಕ್ಕಮಗಳೂರಿಗೆ ಪ್ರಧಾನಿ ಇಂದಿರಾ

ಚಿಕ್ಕಮಗಳೂರು: ಚುನಾವಣಾ ಪ್ರಚಾರದ ಅಂಗವಾಗಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಡಿ.೧೫ರಂದು ಮಧ್ಯಾಹ್ನ ೪ ಗಂಟೆಗೆ ಹಾಗೂ ೨೯ರಂದು ಮ. ೧ ಗಂಟೆಗೆ ಚಿಕ್ಕಮಗಳೂರಿಗೆ ಬಂದು ಸಾರ್ವಜನಿಕ ಭಾಷಣ ಮಾಡುವರು.

ಶೃಂಗೇರಿಯಲ್ಲಿ ಜಿಲ್ಲಾ ಮಟ್ಟದ ಭಾವಗೀತೆ, ಜನಪದಗೀತೆ ಸ್ಪರ್ಧೆ

ಶೃಂಗೇರಿ: ಇಲ್ಲಿನ ಫ್ಲಾಶ್ ಅಸೋಸಿಯೇಷನ್ ಆಶ್ರಯದಲ್ಲಿ ತಾ| ೨೫-೧೨-೮೨ರ ಶನಿವಾರ ಬೆಳಿಗ್ಗೆ ೧೦ ಘಂಟೆಗೆ ಶೃಂಗೇರಿಯ ಕಿರಿಯ ಪ್ರಾಥಮಿಕ ಪಾಠ ಶಾಲೆಯ ಆವರಣದಲ್ಲಿ ಜಿಲ್ಲಾ ಮಟ್ಟದ ಭಾವಗೀತೆ, ಜನಪದಗೀತೆ ಮತ್ತು ಚಲನಚಿತ್ರ ಗೀತೆ ಸ್ಪರ್ಧೆಗಳನ್ನು ನಡೆಸಲಾಗುವುದು. ಸ್ಪರ್ಧಿಗಳಿಗೆ ದಿನಾಂಕ ೨೫-೧೨-೮೨ರ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗಿದ್ದು, ಪ್ರವೇಶ ಶುಲ್ಕ ಯಾವುದೇ ಒಂದು ಸ್ಪರ್ಧೆಗೆ ೫ ರೂ. ಮತ್ತು ಮೂರು ಸ್ಪರ್ಧೆಗೆ ೧೦ ರೂ. ಇರುತ್ತೆ. ಹೆಸರು, ವಿಳಾಸ ಮತ್ತು ಭಾಗವಹಿಸುವ ಸ್ಪರ್ಧೆಯ ವಿವರಗಳನ್ನೊಳಗೊಂಡ ಪ್ರವೇಶ ಪತ್ರಗಳನ್ನು ಕಾರ್ಯದರ್ಶಿ, ಫ್ಲಾಶ್ ಅಸೋಸಿಯೇಷನ್, ಶೃಂಗೇರಿ, ಇವರಿಗೆ ಕಳಿಸಿಕೊಡಲು ಕೋರಿದೆ. ಸ್ವೀಕರಿಸಲು ಕೊನೆಯ ದಿನಾಂಕ ೨೨-೧೨-೮೨.

ಹೆಬ್ರಿ ಬಳಿ ಮಿನಿಬಸ್ ದುರಂತ: ಐದು ಸಾವು

ಕೊಪ್ಪ: ಶಂಕರ್ ಕಂಪನಿಯ ಉಡುಪಿ-ಬಾಳೆಹೊನ್ನೂರು ಮಿನಿ ಬಸ್ಸು ಡಿ. ೬ರಂದು ಹೆಬ್ರಿಯ ಹತ್ತಿರ ಅಪಘಾತಕ್ಕೀಡಾಗಿ, ಇಬ್ಬರು ಸ್ಥಳದಲ್ಲೇ ಅಸುನೀಗಿ, ಮತ್ತೆ ಮೂವರು ಆಸ್ಪತ್ರೆಯಲ್ಲಿ ಮರಣ ಹೊಂದಿದ್ದಾಗಿ ವರದಿಯಾಗಿದೆ.

ಗೋರಿಗಂಡಿಯ ಒಬ್ಬ ತಾಯಿ ಮತ್ತು ಆಕೆಯ ಇಬ್ಬರು ಗಂಡು ಮಕ್ಕಳು, ಶೃಂಗೇರಿಯ ತಾ.ವ್ಯ.ಮಾ.ಸ.ಸಂಘದ ನೌಕರ ಡಿ.ಎಂ.ವಿಜಯೇಂದ್ರ ಹಾಗೂ ಇನ್ನೊಬ್ಬ ವ್ಯಕ್ತಿ ಮರಣ ಹೊಂದಿದವರೆಂದು ತಿಳಿದು ಬಂದಿದೆ.

ಬಸ್ಸು ಇಳಿಜಾರಿನಲ್ಲಿ ಹೋಗುತ್ತಿದ್ದಾಗ ಬ್ರೇಕ್ ವಿಫಲವಾಗಿ ಹತೋಟಿ ತಪ್ಪಿತೆಂದೂ, ತನ್ನ ಇಪ್ಪತ್ತು ವರ್ಷಗಳ ಸರ್ವಿಸಿನಲ್ಲಿ ಒಮ್ಮೆಯೂ ಅಪಘಾತ ಮಾಡದ ಡ್ರೈವರ್ ಸೋಮಣ್ಣ ಬಹಳ ಚಾಣಾಕ್ಷತನದಿಂದ ಮೂರು ಮರಗಳನ್ನು ಒಂದಾದಮೇಲೊಂದರಂತೆ ತಪ್ಪಿಸಿದರೂ ನಾಲ್ಕನೇ ಮರಕ್ಕೆ ಬಸ್ಸಿನ ಬದಿ ಉಜ್ಜಿತೆಂದೂ ಹೇಳಲಾಗಿದೆ. ಆದೊಂದು ಮರ ತಪ್ಪಿದ್ದರೆ ಬಸ್ಸು ಯಾರಿಗೂ ಯಾವುದೇ ಅಪಾಯವಾಗದಂತೆ ಪಾರಾಗುತ್ತಿತ್ತೆಂದೂ ಹೇಳಲಾಗಿದೆ. ಡ್ರೈವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಶೃಂಗೇರಿ ಕ್ಷೇತ್ರ: ೧೨ ನಾಮಪತ್ರ

ಕೊಪ್ಪ: ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಕೆ ಮುಕ್ತಾಯವಾಗುವ ವೇಳೆಗೆ ಡಿ. ೧೧ರಂದು [illegible] ರಾಮಯ್ಯ, ಹೆಚ್. ಜಿ. ಗೋವಿಂದ ಗೌಡ, ಬಿ.ಎಸ್.ವಿಠ್ಠಲರಾವ್ ಅವರನ್ನೂ ಸೇರಿದಂತೆ ಒಟ್ಟು ೧೨ ನಾಮಪತ್ರಗಳು [illegible] ಬಿದ್ದವು.

ಅರ್ಜಿಗಳು ರಿಕಾರ್ಡ್ ಆದವು

ಜಯಪುರ: ಇಲ್ಲಿನ ರೆವಿನ್ಯೂ ಇನ್‌ಸ್ಪೆಕ್ಟರ್ ಸುಬ್ಬಾಶಾಸ್ತ್ರಿಯವರು ನ. ೨೫ರಂದು ಅತ್ತಿಕುಡಿಗೆ ಗ್ರಾಮದ ಅತಿ ಹಿಂದುಳಿದ ಹಳ್ಳಿಯಾದ ಮೆಣಸಿನಹಾಡ್ಯಕ್ಕೆ ಭೇಟಿ ಕೊಟ್ಟು, ೩ ಅಂಗವಿಕಲರ ಅರ್ಜಿಗಳು, ೨ ವೃದ್ಧಾಪ್ಯ ವೇತನದ ಅರ್ಜಿಗಳು ಹಾಗೂ ೧೬ ಜನರ ದರ್ಖಾಸ್ತು ಅರ್ಜಿಗಳನ್ನು ರಿಕಾರ್ಡ್ ಮಾಡಿದ್ದಾರೆಂದು ತಿಳಿದು ಬಂದಿದೆ. ಇದಕ್ಕಾಗಿ ಇಲ್ಲಿನ ಗಿರಿಜನರು (ಪ್ರಯೋಜನ ಪಡೆದವರು) ತಮ್ಮ ಕೃತಜ್ಞತೆ ಸೂಚಿಸಿದ್ದಾರೆ.

[ಸುಬ್ಬಾಶಾಸ್ತ್ರಿಗಳು ಇದೇ ರೀತಿ ತಮ್ಮ [illegible] ನೂರಾರು ಹರಿಜನ-ಗಿರಿಜನರ [illegible] ವರ್ಗದವರ ಹಲವಾರು ಅರ್ಜಿಗಳ [illegible] ಮಾಡಿ, ಅವರಿಗೆ [illegible] ತೆಗೆಸ

ನ. ೨೯ರಂದು ನಡೆದ ಕೊಪ್ಪದ

ತಾ.ಅ.ಮುಂ. ಸಭೆಯ ತೀರ್ಮಾನಗಳು

ಕೊಪ್ಪ: ಬಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ಇಲ್ಲಿನ ತಾ.ಅ.ಮುಂ.ಸಭೆ ನ.೨೯ರಂದು ನಡೆದು ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಂಡಿತು:

ಸ್ಪೆಶಲ್ ಕಾಂಪೊನೆಂಟ್ ಯೋಜನೆಯಲ್ಲಿ ೩ ಕಡೆ, ಗಿರಿಜನ ಅಭಿವೃದ್ಧಿ ಯೋಜನೆಯಲ್ಲಿ, ೩ ಕಡೆ ಶಾಲಾ ಕೊಠಡಿ ಕಟ್ಟಿಸುವುದು.

ನೇಗಿಲು ಭಾಗ್ಯ ಯೋಜನೆಗೆ ಹೆಚ್ಚು ಹಣ ಮಂಜೂರು ಮಾಡುವಂತೆ ಶಿವೀಷ ಜಿಲ್ಲಾಧಿಕಾರಿಗಳನ್ನು ಕೋರುವುದು;

೨೫,೦೦೦ ರೂ. ವೆಚ್ಚದಲ್ಲಿ ಹರಿಜನರಿಗಾಗಿ ವಿವಿಧ ಕಾಮಗಾರಿಗಳಿಗೆ ಒಪ್ಪಿಗೆ;

ತಾ॥ನ ಗ್ರಾಮಾಂತರ ಶಾಲಾ ಕೊಠಡಿಗಳಿಗೆ ಅಗತ್ಯವಿರುವ ಕಡೆ ದುರಸ್ತಿ;

ನಿಲುವಾಗಲು, ಕೆಸವೆ ಪಂಚಾಯ್ತಿಗಳಿಗೆ ಜಾನುವಾರು ಆಸ್ಪತ್ರೆ ಮಂಜೂರು ಮಾಡುವಂತೆ ಸರ್ಕಾರವನ್ನು ಕೇಳುವುದು;

ಗ್ರಾಮಾಂತರ ಪ್ರದೇಶಗಳ ೭ ಹರಿಜನರ ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಇಲಾಖೆಯನ್ನು ಕೇಳುವುದು.

ಇವಲ್ಲದೆ ದೈನಂದಿನ ಅನೇಕ ಅಭಿವೃದ್ಧಿ ಕಾರ್ಯಗಳ ಬಗ್ಗೆಯೂ ಸಭೆ ತೀರ್ಮಾನಗಳನ್ನು ತೆಗೆದುಕೊಂಡಿತು.

ಯುವಕ ರೈತ ಸಂಘ ಪುನಃ ಸ್ಥಾಪನೆ

ಮೆಣಸಿನ ಹಾಡ್ಯ: ಮೂರ್ನಾಲ್ಕು ವರ್ಷಗಳ ಹಿಂದೆ ಇಲ್ಲಿ ಒಳ್ಳೆಯ ಸ್ಥಿತಿಯಲ್ಲಿದ್ದು ಇತ್ತೀಚೆಗೆ ನಿಂತು ಹೋಗಿದ್ದ ಇಲ್ಲಿನ ದುರ್ಗಾಪರಮೇಶ್ವರಿ ಯುವಕ ರೈತ ಸಂಘ ನ. ೨೮ರಂದು ಪುನಃ ಸ್ಥಾಪನೆಯಾಯಿತು. ಅತ್ತಿಕುಡಿಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿ.ಎಸ್.ವಾಸುದೇವ ಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಅಧ್ಯಕ್ಷರಾಗಿ ಜಿ.ಡಿ.ನಾಗೇಗೌಡ, ಕಾರ್ಯದರ್ಶಿಯಾಗಿ ಜಿ. ಕೆ. ಕೆಂಪೇಗೌಡ ಹಾಗೂ ಇತರ ೯ ಜನರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಮಡಿವಳಸಂಘದ ಸಂಘಟನಾ ಕಾರ್ಯದರ್ಶಿಯಾಗಿ ಹುಲಿಕೆರೆ ಮಂಜುನಾಥ್

ಬೆಂಗಳೂರು: ಕರ್ನಾಟಕ ರಾಜ್ಯ ಮಡಿವಳ ಯುವಕ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ಜಿಲ್ಲೆಯ ಪತ್ರಕರ್ತ ಹುಲಿಕೆರೆ ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಯುವಕ ಸಂಘದ ಅಧ್ಯಕ್ಷರಾಗಿ ರಾಜ್ಯ ಮಟ್ಟದ ವಾರ ಪತ್ರಿಕೆ 'ಮಡಿವಳ ರತ್ನ'ದ ಸಂಪಾದಕ ಸಿ. ಎಸ್. ಚಂದ್ರಭೂಪಾಲ್ (ಶಿವಮೊಗ್ಗ) ಅವರೂ, ಪ್ರಧಾನ ಕಾರ್ಯದರ್ಶಿಯಾಗಿ ಮಂಡ್ಯದ ಹೆಚ್.ಜಿ.ಶಿವರಾಂ ಅವರೂ ಆಯ್ಕೆಯಾಗಿದ್ದಾರೆ.

ಹೊಳೆಯಲ್ಲಿ ಮುಳುಗಿ ಮರಣ

ಶೃಂಗೇರಿ: ಡಿ.೫ರಂದು ಇಲ್ಲಿನ ತುಂಗಾ ನದಿಯಲ್ಲಿ ಮೀಯುತ್ತಿದ್ದ ೧೦ ವರ್ಷದ ಯಾತ್ರಿಕ ಹುಡುಗನೊಬ್ಬ ಸುಳಿಗೆ ಸಿಕ್ಕಿ ಮರಣ ಹೊಂದಿದ್ದಾನೆ. ಮಠದ ಬಳಿಯ ಅಪಾಯದ ಸ್ಥಳದಲ್ಲಿ ಈ ದುರ್ಘಟನೆ ನಡೆಯಿತು.

ಶೃಂಗೇರಿ: ಮಹಿಳಾಸಮಾಜದ ಸ್ಪಷ್ಟೀಕರಣ

(೩ನೇ ಪುಟದಿಂದ)

ತರಗತಿಯ ಅವಧಿಯಲ್ಲಿ ಅಭ್ಯರ್ಥಿಗಳು ಎಲ್ಲಿಗೂ ಹೋಗಕೂಡದೆಂಬುದು ನಮ್ಮ ನಿಯಮ. ಅಭ್ಯರ್ಥಿಗಳಿಗೆ ಏನಾದರೂ ಬೇಡಿಕೆಯಿದ್ದರೆ ಬರೆದು ಎಲ್ಲರೂ ಸಹಿ ಹಾಕಿ, ಯಾರಾದರೊಬ್ಬರು ಪ್ರತಿನಿಧಿಯಾಗಿ ಹೋಗಿ ಕೊಟ್ಟು ಬರಲು ತಿಳಿಸಿದ್ದೇವೆ. ತರಗತಿಯ ಅವಧಿಯಲ್ಲಿ ಗೈರು ಹಾಜರಾಗಿ ಅಹಿತಕರ ಪ್ರಸಂಗಗಳನ್ನು ಹಿಂದೆ ಉಂಟುಮಾಡಿದ್ದನ್ನು ತಪ್ಪಿಸಲು ಈ ಕ್ರಮ, ಅಷ್ಟೆ.

ವಿಶೇಷ ವರದಿಗಾರರು ದೂರುಗಳ ಬಗ್ಗೆ ವಿಚಾರಣೆ ನಡೆಸಲು ಹಳ್ಳಿಗಳಿಗೂ ಹೋಗಿ ಮಾಹಿತಿ ಸಂಗ್ರಹಿಸಿ, ಸಮಾಜದ ಪದಾಧಿಕಾರಿಯೊಬ್ಬರ ಹೆಸರನ್ನು ಹೇಳಿ ಆರೋಪಿಸುವ ಮೊದಲು ಸಮಾಜದ ಯಾರೊಬ್ಬರನ್ನೂ ಭೇಟಿ ಮಾಡುವ ಸೌಜನ್ಯ ತೋರಿಸದಿರುವುದು ವಿಷಾದನೀಯ. ಆದರೂ, ನಮ್ಮ ಕೋರಿಕೆಯಂತೆ ಸಂಪಾದಕರು ನಮ್ಮನ್ನು ಸಂಪರ್ಕಿಸಿ ನಮ್ಮ ಹೇಳಿಕೆ ಪ್ರಕಟಿಸುವ ಭರವಸೆ ನೀಡಿದ್ದಕ್ಕಾಗಿ ಕೃತಜ್ಞತೆಗಳು.

ಶ್ರೀಮತಿ ಭಾರತಿ,
ಶ್ರೀಮತಿ ಸೌಭಾಗ್ಯ,
ಶೃಂಗೇರಿ.

[ಸಮಾಜದ ಕಾರ್ಯದರ್ಶಿನಿಯವರನ್ನು ಭೇಟಿ ಮಾಡಬೇಕೆಂಬ ಉದ್ದೇಶ ನನಗೆ ಇತ್ತಾದರೂ ಸಾಧ್ಯವಾಗಲಿಲ್ಲ. ಉದ್ದೇಶಪೂರ್ವಕವಲ್ಲದ ಲೋಪಕ್ಕಾಗಿ ವಿಷಾದಿಸುತ್ತೇನೆ.

—ಮಾ.ಶೀ.ಗಣಪತಿ,
'ಮುಂಜಾವು' ವಿಶೇಷ ವರದಿಗಾರ.]

ಮಹಿಳಾ ವಿವಿಧೋದ್ದೇಶ

ಸಹಕಾರ ಸಂಘ ಸ್ಥಾಪನೆ ನಿರ್ಧಾರ

ಕೊಪ್ಪ: ಡಿ. ೭ರಂದು ಇಲ್ಲಿ ನಡೆದ ತಾ॥ನ ಎಲ್ಲಾ ಮಹಿಳಾ ಸಮಾಜಗಳ ಅಧ್ಯಕ್ಷಿಣಿಯರ—ಕಾರ್ಯಕರ್ತೆಯರ ಸಭೆಯಲ್ಲಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘವನ್ನು ಕೊಪ್ಪದಲ್ಲಿ ಪ್ರಾರಂಭಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಬಿ. ಜಿ. ಚಿದಂಬರ್ ಅಧ್ಯಕ್ಷತೆ ವಹಿಸಿದ್ದ ಈ ಸಭೆಯ ಉದ್ದೇಶಗಳನ್ನು ವಿವರಿಸಿದ ಬಿ. ಕೆ. ಬಾಲಣ್ಣ ಗೌಡರು ಎಲ್ಲರನ್ನೂ ಸ್ವಾಗತಿಸಿದರು.

ಚಿಕ್ಕಮಗಳೂರು ಜಿಲ್ಲಾ ಸಹಕಾರ ಸಂಘಗಳ ಅ॥ ರಿಜಿಸ್ಟ್ರಾರ್ ದೀಪಕ್ ರಾವ್ ಮ.ವಿ.ಸ. ಸಂಘದ ಅಗತ್ಯವನ್ನು ವಿವರಿಸಿದರು.

ತಾ.ಅ.ಮುಂ.ಉಪಾಧ್ಯಕ್ಷೆ ಹೆಚ್.ಎಸ್. ಸುಮಿತ್ರಾ ವಂದಿಸಿದರು.

ಶೀಘ್ರವಾಗಿ ಶೇರು ಹಣ ಸಂಗ್ರಹಿಸಲು ತೀರ್ಮಾನಿಸಲಾಯಿತು.

ಶೃಂಗೇರಿ ತಾ॥ ಮಟ್ಟದ ವಿವಿಧ ಸಾಹಿತ್ಯ ಸ್ಪರ್ಧೆ

ಶೃಂಗೇರಿ: ಡಿ.೮ರಂದು ಶ್ರೀಮಠದ ಶ್ರೀ... ನಿಕೇತನದ ಆವರಣದಲ್ಲಿ ಶೃಂಗೇರಿ ತಾಲ್ಲೂಕು ಮಟ್ಟದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ವಿವಿಧ ಸಾಹಿತ್ಯ ಸ್ಪರ್ಧೆಗಳು ನಡೆದವು. ಈ ಕಾರ್ಯಕ್ರಮವನ್ನು ಶೃಂಗೇರಿ **ಸರ್ಕಾರಿ ಪ್ರೌಢಶಾಲೆಯವರು** ವಿದ್ಯಾರ್ಥಿ ಕ್ಷೇಮನಿಧಿಯ ವತಿಯಿಂದ ನಡೆಸಿದರು. ತಾಲ್ಲೂಕಿನ ನಾಲ್ಕು ಪ್ರೌಢಶಾಲೆಗಳ ಮಕ್ಕಳು ಭಾಗವಹಿಸಿದ್ದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ; ಕೊ...

ತಾ॥ ಯುವಜನ ಒಕ್ಕೂಟದ

ಬಹುಮಾನ ಯೋಜನೆ ಫಲಿತಾಂಶ

ಬಹುಮಾನ ಗೆದ್ದ ಸಂಖ್ಯೆಗಳು:

ಮೊದಲ ಬಹುಮಾನ:		632
2ನೇ	,,	2564
3ನೇ	,,	2114

ಸಮಾಧಾನಕರ ಬಹುಮಾನಗಳನ್ನು ಗೆದ್ದ ಸಂಖ್ಯೆಗಳು:

2527, 1058, 971, 2697

ವಿಜೇತರು ಸಹಾಯಕ ಯುವ ಸೇವಾಧಿಕಾರಿಗಳು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿ, ಬಾಳಗಡಿ, ಕೊಪ್ಪ, ಇವರಲ್ಲಿ ವಿಚಾರಿಸಬಹುದು.

ಪುರಸಭಾ ಕಾರ್ಯಾಲಯ,
ಕೊಪ್ಪ, ದಿನಾಂಕ 10-12-1982.
ಚಿಕ್ಕಮಗಳೂರು ಜಿಲ್ಲೆ.

ಕೊಪ್ಪ ಬಸ್ ನಿಲ್ದಾಣದ ಹತ್ತಿರ ಇರುವ ಪುರಸಭೆಗೆ ಸೇರಿದ 10 ಅಂಗಡಿ ಮಳಿಗೆಗಳಲ್ಲಿ ವ್ಯಾಪಾರ ಮಾಡುವ ಲೈಸೆನ್ಸ್ ಹಕ್ಕಿನ ಆಕ್ಷನ್ ನೋಟಿಫಿಕೇಷನ್.

ನೋಟಿಫಿಕೇಷನ್ ನಂ: ಹೆಚ್.ಸಿ.ಪಿಆರ್. 405/82-83/10-12-1982.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಪುರಸಭೆಗೆ ಸೇರಿದ ಬಸ್ ನಿಲ್ದಾಣದ ಹತ್ತಿರ ಇರುವ 10 ಅಂಗಡಿ ಮಳಿಗೆಗಳಲ್ಲಿ 1-1-83 ರಿಂದ 31-3-1986ರ ವರೆಗೆ ವ್ಯಾಪಾರ ಮಾಡುವ ಲೈಸೆನ್ಸ್ ಹಕ್ಕನ್ನು **ದಿನಾಂಕ 26-12-1982 ರಂದು ಬೆಳಿಗ್ಗೆ 11-00 ಗಂಟೆಗೆ** ಪುರಸಭಾ ಕಾರ್ಯಾಲಯದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಪುರಸಭೆಯ ಅಧ್ಯಕ್ಷರು ಯಾ ಮುಖ್ಯಾಧಿಕಾರಿಯವರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಿಲೇವಾರಿ ಮಾಡಲಾಗುವುದು. ಇಷ್ಟವುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.

ಷರತ್ತುಗಳು:— 1. ಲೈಸೆನ್ಸ್ ಹಕ್ಕನ್ನು ಪಡೆಯಲು ಹರಾಜಿನಲ್ಲಿ ಭಾಗವಹಿಸುವವರು ಬಿಡ್ ಮಾಡುವುದಕ್ಕೆ ಮುಂಚೆ 500-00 ರೂ. ಡಿಪಾಜಿಟ್ ಮಾಡಬೇಕು.

2. ಪುರಸಭೆಗೆ ಬಾಕಿದಾರರಾಗಿರುವವರು ಬಿಡ್‌ನಲ್ಲಿ ಭಾಗವಹಿಸಲು ಅನರ್ಹರಾಗಿರುತ್ತಾರೆ.

3. ಅಖೈರು ಬಿಡ್ಡುದಾರರು 6 ತಿಂಗಳ ಲೈಸೆನ್ಸ್ ಫೀಜನ್ನು ಹರಾಜು ಕೈದಾದ ಕೂಡಲೇ ಕಟ್ಟಿ ರಸೀದಿ ಪಡೆಯತಕ್ಕದ್ದು.

4. ಉಳಿದ ಷರತ್ತು ಮತ್ತು ವಿವರಗಳನ್ನು ಈ ಕಾರ್ಯಾಲಯದಿಂದ ದಿನಾಂಕ 10-12-1982 ರಂದು ಹೊರಡಿಸಿರುವ ನೋಟಿಫಿಕೇಷನ್ ಕರಪತ್ರದಲ್ಲಿ, ಹಾಗೂ ಪುರಸಭಾ ಕಾರ್ಯಾಲಯದಲ್ಲಿ ಪಡೆಯಬಹುದು.

(ಸಹಿ) **ಆರ್. ಗುಂಡೂರಾವ್,**
ಪುರಸಭಾ ಮುಖ್ಯಾಧಿಕಾರಿಗಳು, ಕೊಪ್ಪ.

ದಿನಾಂಕ: 10-12-82.